# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 22.06.2022 ರಂದು ಬುಧವಾರ ಸಮಯ ಬೆಳ್ಳಿಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು, ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 2 | ಶ್ರೀ ಕುರ್ಲ್ಕಣಿ | ಸದಸ್ಯರು |
| 3 | ಶ್ರೀ ಕೋದಂಡ್ ರೆಡ್ಡಿ | ಸದಸ್ಯರು |
| 4 | ಶ್ರೀ ಗೀರಿಶ್. ಎಸ್ | ಸದಸ್ಯರು |
| 5 | ಶ್ರೀ ಮುನಿರಾಜು | ಸದಸ್ಯರು |
| 6 | ಶ್ರೀ ಗುರುಸ್ವಾಮಿ ಹಿರೇಮಠ್ | ಪಿ.ಎಸ್.ಐ, ಬೇಗೂರು ಪೋಲಿಸ ಠಾಣೆ |
| 7 | ಶ್ರೀ ಹೆಚ್ ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ;189 ಹೊಂಗಸಂದ್ರ |
| 8 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ;189 ಹೊಂಗಸಂದ್ರ |
| 9 | ಶ್ರೀ ರಮೇಶ್. ಡಿ | ಸ.ಅ. ವಿದ್ಯುತ್ (ಬೀದಿದೀಪ) |
| 10 | ಶ್ರೀ ಚಂದನ್ | ಕಿ.ಅ ಬೆಸ್ಕಾಂ |
| 11 | ಶ್ರೀ ಸಂತೋಷ್ ಪ್ರಸಾದ್ | AE, BWSSB |
| 12 | ಶ್ರೀ ರಾಮಕೃಷ್ಣ ಆರ್ | ಕಂದಾಯ ಪರಿವೀಕ್ಷಕರು, ವಾರ್ಡ್– 189 |
| 13 | ಶ್ರೀಮತಿ ರಶ್ಮಿ | ಪಿ.ಸಿ, ಬೊಮ್ಮನಹಳ್ಳಿ ಪೋಲೀಸ್ ಠಾಣೆ |
| 14 | ಶ್ರೀ ಶಿವ ಕುಮಾರ್ ಎಲ್ | ಮಾರ್ಷಲ್, ವಾರ್ಡ್– 189 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು, ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಅಧ್ಯಕ್ಷರು/ನೋಡಲ್ ಅಧಿಕಾರಿರವರು ಪ್ರಾರಂಭಿಸಿದರು.

- **ವಿದ್ಯುತ್ ಬೀದಿ ದೀಪ.**

1. ವಾರ್ಡ್ ಸದಸ್ಯರಾದ ಶ್ರೀ ಕೋದಂಡ್ ರೆಡ್ಡಿ ರವರು ಬೀದಿ ದೀಪದ ಕಂಬಗಳ ಬಗ್ಗೆ ಕುರಿತು ಆದರ್ಶ್ ಲೇಔಟ್ ಮತ್ತು ವಾಜ್‌ಪೇಯಿ ಲೇಔಟ್‌ಗಳಲ್ಲಿ ಡಿ.ಪಿ.ಸಿ ಸ್ವಿಚ್ ಮತ್ತು ಟೈಮರ್ ಸ್ವಿಚ್‌ಗಳನ್ನು ಅಳವಡಿಸಲು ಕೋರಿರುತ್ತರೆ ಮತ್ತು ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ಸರಿಯಾಗಿ ಹುರಿಯದಿರುವ ಕಾರಣ ಅವುಗಳನ್ನು ರಿಪೇರಿ ಮಾಡಲು ಕೋರಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ವಿದ್ಯುತ್ ಬೀದಿದೀಪ ರವರಿಗೆ ನೋಡಲ್ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

- **ಎಸ್.ಡಬ್ಲ್ಯೂ.ಡಿ ಇಲಾಖೆ.**

1. ಸಭೆಗೆ ಗೈರು ಹಾಜರಾಗಿದ್ದು ಈ ವಿಷಯದ ಸಂಬಂಧ ಯಾವುದೇ ಚರ್ಚೆಯು ನಡೆದಿರುವುದಿಲ್ಲ..

(2...)

CamScanner

- **ಕಾಮಗಾರಿ ಇಲಾಖೆ**

1. ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ರಸ್ತೆ ಗುಂಡಿಗಳ ಬಗ್ಗೆ ಚರ್ಚಿಸುತ್ತಾ 9ನೇ ಮುಖ್ಯರಸ್ತೆ 4ನೇ ಅಡ್ಡರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ ಮತ್ತು ಸರಿಯಾಗಿ ಮುಚ್ಚಿಲ್ಲವೆಂದು ತಿಳಿಸಿರುತ್ತಾರೆ.
2. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಇಂದಿನ ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಕಾರ್ಯದರ್ಶಿ/ವಾರ್ಡ್‌ನ ಸಹಾಯಕ ಅಭಿಯಂತರರು, ರವರು ಸಿಲ್ಟ್ & ಟ್ರಾಕ್ಟರ್ ಕಾಮಗಾರಿಯು ಚಾಲ್ತಿಯಲ್ಲಿದ್ದು ಎಲ್ಲಾ ಕಡೆ ಹೂಳನ್ನು ತೆಗೆದು ಛಾಯಾಚಿತ್ರಗಳನ್ನು ದಿನೆದಿನೆ ಅಪ್‌ಡೇಟ್ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ.
3. ಸಮುಧಾಯ ಭವನ ಮತ್ತು ಸರ್ಕಾರಿ ಶಾಲೆಯ ಕಾಮಗಾರಿಯ ಪ್ರಾರಂಭದ ಬಗ್ಗೆ ಚರ್ಚಿಸಲಾಯಿತು.

- **ಬೊಮ್ಮನಹಳ್ಳಿ ಪೋಲಿಸ್ ಠಾಣೆ**

1. ಬ್ರಾಂಡ್ ಫ್ಯಾಕ್ಟರಿ ರಸ್ತೆಯ ಹತ್ತಿರ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಪೋಲಿಸ್ ಬೀಟ್ಸ್ ನಿಯಮಿತವಾಗಿ ನಡೆಸಲು ಮತ್ತು ಸದರಿ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು ಹಾಗೂ ಈಗಾಗಲೇ ಇರುವ ಕ್ಯಾಮರಗಳನ್ನು ರಿಪೇರಿ ಮಾಡಲು ವಾರ್ಡ್ ಕಾರ್ಯದಶಿಗಳು/ನೋಡಲ್ ಅಧಿಕಾರಿಯವರ ಗಮನಕ್ಕೆ ತಂದರು ಅದರಂತೆ ನೋಡಲ್ ಅಧಿಕಾರಿಯವರು ಪಿ.ಎಸ್.ಐ ಬೊಮ್ಮನಹಳ್ಳಿ ರವರಿಗೆ ಸೂಚಿಸಿದರು.

- **ಘನತ್ಯಾಜ್ಯ:-**

1. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿ ಮತ್ತು bleaching powder ಸಿಂಪಡಿಸುವಂತೆ ವಾರ್ಡ್ ಸದಸ್ಯರು ಕೋರಿದರು, ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದ್ದರು.

- **ಆರೋಗ್ಯ ಇಲಾಖೆ:**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೋವಿಡ್-19ರ ಪ್ರಯುಕ್ತ ವೈದ್ಯರನ್ನು ನೇಮಿಸಿದ್ದರು, ಕೋವಿಡ್-19 ಇಳಿಕೆಯಾಗಿರುವುದರಿಂದ ವೈದ್ಯರನ್ನು ತಮ್ಮ ಮಾತೃ ಇಲಾಖೆ ಹಿಂದಿರುಗಿಸಿರುತ್ತಾರೆ. ಆದ್ದರಿಂದ ಖಾಯಂ ವೈದ್ಯರು ಇಲ್ಲದೆ ಇರುವುದರಿಂದ ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಅನಾನೂಕೂಲವಾಗುತ್ತಿದ್ದು, ಆದ್ದರಿಂದ ಖಾಯಂ ವೈದ್ಯರು, ನರ್ಸ್, Lab Technician ಕೊರತೆ ಇದ್ದು, ಇವರನ್ನು ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮಾನ್ಯ ನೋಡಲ್ ಅಧಿಕಾರಿಗಳಲ್ಲಿ ಕೋರಿದ್ದು, ಅದರಂತೆ ಮಾನ್ಯ ನೋಡಲ್ ಅಧಿಕಾರಿ ಆರೋಗ್ಯ ವೈದ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ದೂರವಾಣಿ ಮೂಲಕ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ವೈದ್ಯಾಧಿಕಾರಿಗಳು ಇಂದು ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ ರವರು ಕೋವಿಡ್-19 ನಾಲ್ಕನೇ ಅಲೆಯ ಬಗ್ಗೆ ಹಾಗೂ ಇತರೆ ವಿಷಯಗಳನ್ನು ಕುರಿತು ಸಭೆಯ ಕರೆದಿದ್ದಾರೆ ಸಭೆಯಲ್ಲಿ ಚರ್ಚಿಸಿದ ನಂತರ ತಮಗೆ ಮಾಹಿತಿ ನೀಡಲಾಗುವುದೆಂದು ಮಾನ್ಯ ನೋಡಲ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಇಲ್ಲಿಯವರೆಗೆ ಯಾವುದು ಕಂಡುಬಂದಿರುವುದಿಲ್ಲ, ಪ್ರತಿ ದಿನ 5107 ಕೋವಿಡ್-19 ಪರೀಕ್ಷೆ ನಡೆಸಲಾಗುತ್ತಿದದೆ, 12-14ನೇ ವರ್ಷದವರೆಗೆ ವ್ಯಾಕ್ಸಿನ್ ನೀಡಲಾಗುತಿದ್ದು, 60 ವರ್ಷದವರಿಗೆ ಬೂಸ್ಟರ್ ನೀಡಲಾಗಿರುತ್ತದೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷಕರು/ನೋಡಲ್ ಅಧಿಕಾರಿಗಳ ಉಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

CamScanner

ಪ್ರತಿಯನ್ನು:-

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ವಿಭಾಗ) ರವರ ಅವಗಾಹನೆಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ಉಪ-ವಿಭಾಗ) ರವರ ಅವಗಾಹನೆಗಾಗಿ ಸಲ್ಲಿಸಿದೆ.
9) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
10) ಕಛೇರಿ ಪ್ರತಿ.

CamScanner